ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಕ/ಉಪನ್ಯಾಸಕರ ವರ್ಗಾವಣೆ ಬಗ್ಗೆ

ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) -

29 (144) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಾಲಾ ಕಾಲೇಜುಗಳ ಶಿಕ್ಷಕ/ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆ/ಕೌನ್ಸಿಲಿಂಗ್ ಮೂಲಕ ಯಾವಾಗ ಮಾಡಲಾಗಿದೆ/ವರ್ಗಾಯಿಸಲಾಗಿದೆ ; ಈ ರೀತಿ ವರ್ಗಾವಣೆಗೊಂಡು ಬಿಡುಗಡೆಗೊಂಡ ಹಾಗೂ ಹಾಜರಾದ ಶಿಕ್ಷಕರ ಸಂಖ್ಯೆ ಎಷ್ಟು ; (ಮಾಹಿತಿ ನೀಡುವುದು)

(ಆ) ಈಗ ವರ್ಗಾವಣೆ ಪ್ರಕ್ರಿಯೆ ನಡೆಸಲು ಇರುವ ಕಾನೂನು ಮಾರ್ಗಸೂಚಿ ಹಾಗೂ ನಿಯಮಗಳು ಯಾವುವು ; (ಪ್ರತಿ ನೀಡುವುದು) ಈಗ ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆ ನಡೆಸಿ ಕಡ್ಡಾಯ ವರ್ಗಾವಣೆ ಮಾಡಿ ನಂತರವೇ ಕೋರಿಕೆ ವರ್ಗಾವಣೆ ಮಾಡುವ ನಿಯಮವಿದೆಯೇ ; (ವಿವರಣಾತ್ಮಕ ವಿವರ ನೀಡುವುದು)

(ಇ) ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಹಂತದಲ್ಲಿ ಹೆಚ್ಚುವರಿ ಪ್ರಕ್ರಿಯೆಗೆ ನಿಗದಿಪಡಿಸಿರುವ ವಿದ್ಯಾರ್ಥಿ, ಶಿಕ್ಷಕರ ಅನುಪಾತ ಎಷ್ಟು ; ವರ್ಗಾವಣೆ ಪ್ರಕ್ರಿಯೆಯಲ್ಲಿ ವರ್ಗಾವಣೆಯಿಂದ ರಿಯಾಯಿತಿ, ವಿನಾಯಿತಿ ಕೊಡ ಮಾಡಿರುವ ಸಮೂಹಗಳಾವುವು ; ಅದಕ್ಕೆ ನಿಗದಿಪಡಿಸಿದ ಮಾನದಂಡಗಳೇನು ;

(ಈ) ಅವುಗಳಲ್ಲಿ ನಡೆಯುತ್ತಿರುವ ಬೋಗಸ್ ಪ್ರಮಾಣ ಪತ್ರ ಹಗರಣ ತಡೆಯುವಲ್ಲಿ ಸರ್ಕಾರದ ಕ್ರಮವೇನು ; ಶಿಕ್ಷಕ ಸಂಘಟನೆಗಳ ಪದಾಧಿಕಾರಿಗಳಿಗೆ ವಿನಾಯಿತಿ, ರಿಯಾಯಿತಿ ನೀಡಲಾಗಿದೆಯೇ ? (ಚುನಾಯಿತ ಪದಾಧಿಕಾರಿಗಳು ಅನ್ನುವುದರ ಬಗ್ಗೆ ಸಂಪೂರ್ಣ ವಿವರ ನೀಡುವುದು)